ತಡೆಯುಂಟಾಗಿ ವಾಪಸ್ಸು ಬಂದಿರುತ್ತಾರೆ. ಹಲವಾರು ಪ್ರಕರಣಗಳಲ್ಲಿ ಮೂಲ ದಾಖಲೆಗಳ ಶಿಥಿಲಾವಸ್ಥೆಯಿಂದ ಮೂಲ ಅಳತೆಗಳ ಟಿಪ್ಪಣಿಗಳ ಲಭ್ಯವಿಲ್ಲವಾದಂತೆ ಮತ್ತು ಪರ್ಯಾಯ ವ್ಯವಸ್ಥೆಯಿಂದ ನಿರ್ಮಾಣ ಮಾಡಲು ಆಗದ ಸ್ಥಿತಿ ತಲುಪಿರುವ ಅಂಶಗಳಿಂದಲೂ ನಿಧಾನ ಆಗಿರುತ್ತದೆ. ಈ ಕುರಿತು ಸಮಾಲೋಚನೆಗಳು ನಡೆಯುತ್ತಿದೆ ಮತ್ತು ಇತರೆ ಕಡತಗಳಲ್ಲಿ ರೆವಿನ್ಯೂ ನಡವಳಿಕೆ, ಸಾರ್ವಜನಿಕರ ಅಸಹಕಾರದಿಂದಲೂ ವಿಳಂಬವಾಗುತ್ತದೆ.

3. ಪೋಡಿ ಅಳತೆಯ ಬಗ್ಗೆ ಮಾಹಿಯಾನ ಪ್ರತಿಯೊಬ್ಬ ಭೂಮಾಪಕರು ಕನಿಷ್ಟ 16 ಅಳತೆ ಕಡತ ಮತ್ತು 4 ದುರಸ್ತಿ ಕಡತವನ್ನು ಕಡ್ಡಾಯಗೊಳಿಸಲಾಗಿದೆ. 1 1/2 ವರ್ಷಗಳ ಪ್ರಗತಿ ಪರಿಶೀಲನೆ ಮಾಡಲಾಗಿ ನಿಗದಿ ಪಡಿಸಿದ ಗುರಿಯನ್ನು ಸದರೀ ಉಪವಿಭಾಗದಲ್ಲಿ ಸಾಧಿಸಲಾಗಿದೆ.
4. ಸರ್ಕಾರ, ಜಿಲ್ಲಾಧಿಕಾರಿಗಳು, ಪಿಡಬ್ಲ್ಯೂಡಿ ಯವರು ಕೋರುವ ಕೆಲಸಗಳನ್ನು ಮತ್ತು ಅಕ್ರಮ ಸಕ್ರಮ ಕೆಲಸ ಸಹ ನಿರ್ವಹಿಸಬೇಕಾಗಿದ್ದಂತೆ ಇರತಕ್ಕ ಸಿಬ್ಬಂದಿಯಲ್ಲಿ ಸದರೀ ಕೆಲಸಕ್ಕೆ ನಿಯೋಜನೆಯನ್ನು ಮಾಡುವದರಿಂದ ಮತ್ತು ಭೂಮಾಪಕರ ಕೊರತೆಯೂ ಸಹ ಒಂದು ಕಾರಣವಾಗಿದೆ.
5. ಆದಾಗ್ಯೂ ಬಾಕಿ ಇರುವ 831 ಹದ್ದು ಬಸ್ತು ಅರ್ಜಿಗಳನ್ನು ಆದ್ಯತೆ ಮೇರೆಗೆ ಅಳತೆ ಮಾಡಲು ಭೂದಾಖಲೆಗಳ ಸಹಾಯಕ ನಿರ್ದೇಶಕರು, ಮಂಡ್ಯ ಉಪವಿಭಾಗ ರವರಿಗೆ ಪ್ರತ್ಯೇಕವಾಗಿ ಸೂಚನೆ ನೀಡಲಾಗಿದೆ.

ರಾಜ್ಯದಲ್ಲಿ ಬೀಡಿ ಉದ್ಯಮ ಮತ್ತು ಬೀಡಿ ಕಾರ್ಮಿಕರಿಗೆ ಸರ್ಕಾರದ ನೆರವು

596 (1187) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಬೀಡಿ ಉದ್ಯಮ ಹಾಗೂ ಕಾರ್ಮಿಕರು ಸಂಕಷ್ಟ ಸ್ಥಿತಿಯಲ್ಲಿ ಇರುವುದನ್ನು ಸರ್ಕಾರ ಗಮನಿಸಿದೆಯೇ? ಹಾಗಿದ್ದಲ್ಲಿ ಬೀಡಿ ಉದ್ಯಮ ಮತ್ತು ಬೀಡಿ ಕಾರ್ಮಿಕರಿಗೆ ನೆರವಾಗಲು ಸರ್ಕಾರ ಕ್ರಮಗಳನ್ನು ರೂಪಿಸಿದಲ್ಲಿ ಅದರ ವಿವರಗಳೇನು?

ಶ್ರೀ ಖಿಮರುಲ್ ಇಸ್ಲಾಂ (ಕಾರ್ಮಿಕ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಬೀಡಿ ಉದ್ಯಮ ಸಮಸ್ಯೆ ರಾಷ್ಟ್ರ ವ್ಯಾಪ್ತಿಯಾಗಿದೆ. ಕೇಂದ್ರ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿದೆ. ಕರ್ನಾಟಕ ರಾಜ್ಯ ಸರ್ಕಾರವು ಕಾರ್ಮಿಕರಿಗೆ ಬೀಡಿ ಮತ್ತು ಸಿಗಾರ್ ಕಾರ್ಮಿಕರ (ಉದ್ಯೋಗ ಸೇವಾ ಷರತ್ತು) ಕಾಯ್ದೆ 1966 ಕಾಯ್ದೆ ಕನಿಷ್ಠ ವೇತನ ಕಾಯ್ದೆ 1948 ಹಾಗೂ ಬೀಡಿ ಕಾರ್ಮಿಕರ ಕಲ್ಯಾಣ ನಿಧಿ ಕಾಯ್ದೆ 1976 ಈ ಕಾಯ್ದೆಗಳು ಪರಿಣಾಮಕಾರಿಯಾಗಿ ಜಾರಿಗೊಳಿಸುವತ್ತ ಸತತ ಪ್ರಯತ್ನ ಕೈಗೊಂಡಿದೆ. ಕನಿಷ್ಠ ವೇತನ ಕಾಯ್ದೆ 1948 ರ ಅಡಿಯಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಪಡಿಸಿದೆ. ಹಾಗೂ ಬೀಡಿ ಕಾರ್ಮಿಕರಿಗೆ ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆ ಅನುಷ್ಠಾನ ಗೊಳಿಸುತ್ತಿರುವ ವಿವಿಧ ಕಾರ್ಮಿಕ ಕಾಯ್ದೆಗಳಡಿಯಲ್ಲಿ, ಬೋನಸ್, ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು, ಹೆರಿಗೆ ಭತ್ಯೆ

ಮುಂತಾದ ಸೌಲಭ್ಯಗಳನ್ನು ಒದಗಿಸಿಕೊಡಲಾಗುತ್ತಿದೆ. ಅಲ್ಲದೆ ಕೇಂದ್ರ ಸರ್ಕಾರದ ಕಾರ್ಮಿಕ ಕಲ್ಯಾಣ ಸಂಸ್ಥೆಯ ಮೂಲಕ ಆರೋಗ್ಯ, ವಸತಿ, ವಿದ್ಯಾಭ್ಯಾಸಕ್ಕೆ ಧನ ಸಹಾಯ ಮತ್ತು ಮನರಂಜನೆ ಇತ್ಯಾದಿ ಹಲವಾರು ಕಲ್ಯಾಣ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಈ ಸವಲತ್ತುಗಳನ್ನು ಎಲ್ಲಾ ಅರ್ಹ ಬೀಡಿ ಕಾರ್ಮಿಕರು ಪಡೆಯುತ್ತಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಬೀಡಿ ಕಾರ್ಮಿಕರ ಮಕ್ಕಳಿಗೆ ಸ್ಕಾಲರ್‌ಶಿಪ್ ಮತ್ತು ಸಮವಸ್ತ್ರಗಳನ್ನು ಕೊಳ್ಳಲು ಧನ ಸಹಾಯವನ್ನು ಕಾರ್ಮಿಕ ಕಲ್ಯಾಣ ಮಂಡಳಿಯು ನೀಡುತ್ತಿದೆ. ಸರ್ಕಾರವು ಬೀಡಿ ಕಾರ್ಮಿಕರಿಗೆ ಸಾಮೂಹಿಕ ವಿಮಾ ಯೋಜನೆಯನ್ನು ಸಹ ಜಾರಿಗೊಳಿಸಿದೆ.

ರಾಜ್ಯದಲ್ಲಿ ಬರಪರಿಹಾರ ಯೋಜನೆ

597 (1188) ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ): ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಬರ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

ಆ) ರಾಜ್ಯದಲ್ಲಿನ ವಿವಿಧ ಜಿಲ್ಲೆಗಳಿಗೆ ಸರ್ಕಾರವು ಬಿಡುಗಡೆ ಮಾಡಿರುವ ಆರ್ಥಿಕ ಅನುದಾನ ಹಾಗೂ ಆಹಾರಧಾನ್ಯಗಳ ವಿವರವೇನು;

ಇ) ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಎದುರಿಸಲು ಬರಪರಿಹಾರ ಯೋಜನೆಯಡಿ ಕ್ರಮ ಕೈಗೊಳ್ಳಲಾಗಿದೆಯೇ;

ಈ) ಕ್ರಮ ಕೈಗೊಂಡಿದ್ದಲ್ಲಿ ಸಿದ್ಧತೆಗಳ ವಿವರವೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) 1. ಉದ್ಯೋಗ ಸೃಜನೆ ಕಾಮಗಾರಿಗಳಿಗಾಗಿ ಆಹಾರ ದಾನ್ಯ ಹಾಗೂ ಅನುದಾನ ಬಿಡುಗಡೆ ಮಾಡಲಾಗಿದೆ.

2. ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಕ್ರಮ ಕೈಗೊಳ್ಳಲಾಗಿದೆ.

3. ಜಾನುವಾರುಗಳಿಗೆ ಮೇವು ಕೊರತೆಯಾಗದಂತೆ ನೋಡಿಕೊಳ್ಳಲು ಮೇವು ಸಾಗಾಣಿಕೆ, ಸರ್ಕಾರಿ ಫಾರ್ಮ್‌ಗಳಲ್ಲಿ ಮೇವು ಬೆಳೆಸುವಿಕೆ, ಔಷಧಿ ಖರೀದಿ ಇತ್ಯಾದಿ ಉದ್ದೇಶಗಳಿಗಾಗಿ ಅನುದಾನ ಬಿಡುಗಡೆ ಮಾಡಿದೆ.

4. ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಕೃಷಿ ಪರಿಕರಗಳ ವಿತರಣೆ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

5. ರೈತರಿಗೆ ಬೆಳೆ ವಿಮಾ ಯೋಜನೆ ಪಾವತಿ, ಸಾಲದ ಬಡ್ಡಿ ಮನ್ನಾ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಆ) ಆರ್ಥಿಕ ಅನುದಾನ ಒಟ್ಟು ರೂ. 187.11 ಕೋಟಿ ಹಾಗೂ 3.65 ಮೆ.ಟನ್ ಆಹಾರ ಧಾನ್ಯವನ್ನು ಇದುವರೆಗೆ ಬಿಡುಗಡೆ ಮಾಡಲಾಗಿದೆ.

ಇ) ಹೌದು.

ಈ) ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಪ್ರತ್ಯೇಕವಾಗಿ ರೂ. 21.40 ಕೋಟಿ ಬಿಡುಗಡೆ ಮಾಡಲಾಗಿದೆ. ಎನ್‌ಸಿಸಿಎಫ್ ನಿಧಿಯಿಂದ ರೂ. 14.00